I call the attention of the Hon. Minister for Education to the shortage of Marathi question papers in the S. S. L. C. Examination at Belgaum.

Sri A. R. BADARINARAYANA (Minister for Education).—Madam Speaker, I beg to make a statement.

The number of candidates registered under the First language Marathi in Beynon Smith high School Centre at Belgaum on 11th April 1973 was 262 and 280 question papers on that subject were supplied to this Centre. It has been ascertained that there was no shortage of question papers in Marathi First Language paper or on any other subject at that Centre.

Sri B. B. SAYANAK :—MadamSpeaker, I personally visited the Centre. The conductor and supervisor have told me that there was a shortage of 20 Marathi papers. The Hon. Minister has given an incorrect statement. So, in protest, I will walk out.

MADAM SPEAKER:—You are probably very hungry, Mr. Sayanak!

(Sri B. B. Sayanak staged a walk out).

3. MATTER RAISED UNDER RULE 312

Re.: Need to postpone collection of Land Revenue in Hassan District in view of Scarcity conditions prevailing in the District.

ಶ್ರೀ ಎಚ್. ಎಸ್. ಸಿದ್ದಪ್ಪ (ಅರಸೀಕೆರೆ):—ಮಾನ್ಯ ಅಧ್ಯಕ್ಷರೆ, ನಮ್ಮ ಅರಸೀಕೆರೆ ತಾಲ್ಲೂಕಿನಲ್ಲಿಕಳೆದ ನಾಲ್ಕೂ ವರ್ಷಗಳಿಂದ ಮಳೆಬೆಳೆಗಳೆಲ್ಲಾ ಹೋಗಿ ಅಲ್ಲಿ ಯಾವ ಒಂದು ಪಚ್ಚೆಪೈರು ಗಳೂ ಆಗಿಲ್ಲ. ನಾನು ಇದೇ ವಿಚಾರದಲ್ಲಿ ಮಾನ್ಯ ರೆವಿನ್ಯೂ ಮಂತ್ರಿಗಳಿಗೂ ಮತ್ತು ಸಹಕಾರ ಮಂತ್ರಿಗಳಿಗೂ ಪತ್ರ ಬರೆದಿದ್ದೇನೆ. ಅಲ್ಲಿ ಮುಂಗಾರಿ ಮಳೆ ಬೀಳುವತನಕ ಕಂದಾಯದ ವಸೂಲಿಯನ್ನು ಮುಂದೂಡಬೇಕೆಂದೂ ಮತ್ತು ಸಹಕಾರ ಬಾಬಿನಲ್ಲಿ ರೈತರಿಗೆ ಕೊಟ್ಟಿರುವ ಷಾರ್ಟ್ ಟರ್ಮ್ ಸಾಲಗಳನ್ನು ಮೀಡಿಯಂ ಟರ್ಮ್ ಸಾಲಗಳಾಗಿ ಪರಿವರ್ತಿಸಬೇಕೆಂದು ಆ ಮನವಿ ಯಲ್ಲಿ ಕಾಣಿಸಿದ್ದೇನೆ. ಅಲ್ಲದೆ ನಮ್ಮ ತಾಲ್ಲೂಕಿನಿಂದ ಸುಮಾರು 40 ಜನರು ಇದೇ ವಿಚಾರದಲ್ಲಿ ಒಂದು ಜಾತಾ ಸಹಾ ಬಂದಿದ್ದರು. ಅವರನ್ನು ಜೊತೆಯಲ್ಲಿ ಕರೆದುಕೊಂಡು ಹೋಗಿ ಮಾನ್ಯ ರೆವಿನ್ಯೂ ಸಚಿವರಿಗೂ ಮತ್ತು ಮಾನ್ಯ ಸಹಕಾರ ಮಂತ್ರಿಗಳಿಗೂ ಅರ್ಜಿಗಳನ್ನು ಕೊಡಿಸಿದ್ದೇನೆ. ಆದರೆ ಇತ್ತೀಚೆಗೆ ಅಲ್ಲಿ ಪೋಲೀಸಿನವರು ರೈತರ ಮನೆಗಳಿಗೆ ನುಗ್ಗಿ ಪಾತ್ರೆಪಡಗುಗಳನ್ನು ಈಚೆಗೆ ಎಳೆಯುತ್ತಿದ್ದಾರೆ. ಇದರ ಬಗ್ಗೆ ಮಾನ್ಯ ರೆವಿನ್ಯೂ ಸಚಿವರು ಒಂದು ಸೂಕ್ತ ಹುಕುಂನ್ನು

ಅವರ ಕೈಕೆಳಗಿನ ಅಧಿಕಾರಿಗಳಿಗೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ರೈತರಿಗೆ ಸ್ವಲ್ಪಕಾಲ ಈ ತೊಂದರೆ ಕೊಡುವುದನ್ನು ತಪ್ಪಿಸಿ, ಅವರನ್ನು ಕಾಪಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ :—ಅಭಾವಪೀಡಿತ ಪ್ರದೇಶಗಳಲ್ಲಿ ಕಂದಾಯದ ವಸೂಲಿಯನ್ನು ಮುಂದೂಡುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ನಿರ್ದಿಷ್ಟ ಸೂಚನೆಗಳನ್ನು ಕಳುಹಿಸಲಾಗಿದೆ. ಅಲ್ಲದೆ ಅದರ ಬಗ್ಗೆ ಕೆಲವು ನಿರ್ದಿಷ್ಟ ನಿಬಂಧನೆಗಳೇ ಇವೆ: ಎಲ್ಲಿ ನಾಲ್ಕಾಣೆಗಿಂತ ಕಡಮೆ ಮಳೆ ಬಿದ್ದಿರುತ್ತದೋ ಅಂಥಾ ಕಡೆಗಳಲ್ಲಿ ಕಂದಾಯವನ್ನು ವಜಾ ಮಾಡಲಾಗುತ್ತದೆ. ಇನ್ನು ಎಲ್ಲಿ ಮಳೆ 26 ಪೈಸೆಗಳಿಂದ 36 ಪೈಸೆಗಳವರೆಗೆ ಬಿದ್ದಿರುತ್ತದೋ ಅಂಥಾ ಕಡೆಗಳಲ್ಲಿ ಕಂದಾಯದ ವಸೂಲಿಯನ್ನು ಮುಂದಕ್ಕೆ ಹಾಕಬೇಕೆಂದಿದೆ. ಈ ವಿಚಾರವನ್ನು ಜಿಲ್ಲಾಧಿಕಾರಿಗಳಿಗೆ ಈಗಾಗಲೇ ತಿಳಿಸಲಾಗಿದೆ. ಇನ್ನು ಪಾರ್ಟ್‌ಟರ್ಮ್ ಸಾಲಗಳನ್ನು ಮೀಡಿಯಂ ಟರ್ಮ್ ಸಾಲಗಳನ್ನಾಗಿ ಪರಿವರ್ತನೆ ಮಾಡತಕ್ಕ ಬಗ್ಗೆ ನನಗೆ ಬಂದಿದ್ದ ಕಾಗದಪತ್ರಗಳನ್ನು ಸಂಬಂಧಪಟ್ಟ ಸಹಕಾರ ಮಂತ್ರಿಗಳಿಗೆ ಕಳುಹಿಸಿಕೊಟ್ಟಿದ್ದೇನೆ. ಆ ಪ್ರದೇಶದಲ್ಲಿ ರೆವಿನ್ಯೂ ಇಲಾಖೆಗೆ ಸಂಬಂಧಪಟ್ಟಂತೆ ನಾನು ತಿಳಿಸಿದ ವಿಷಯಗಳನ್ನು ಕೈಗೊಳ್ಳತಕ್ಕ ಭರವಸೆಯನ್ನು ಮಾನ್ಯ ಸಿದ್ದಪ್ಪನವರಿಗೆ ಕೊಡುವುದಕ್ಕೆ ಇಚ್ಛಿಸುತ್ತೇನೆ.

ಶ್ರೀ ಎಚ್. ಎಸ್. ಸಿದ್ದಪ್ಪ :—ಇನ್ನು ನನಗೆ ಮಾನ್ಯ ಸಹಕಾರ ಸಚಿವರಿಂದ ಒಂದು ಭರವಸೆ ಬಂದರೆ ಸಾಕು. ನಾನು ಸಾಲಗಳನ್ನು ಮನ್ನಾಮಾಡಿ ಎಂದು ಕೇಳುತ್ತಿಲ್ಲ. ಆದರೆ ಪಾರ್ಟ್ ಟರ್ಮ್ ಸಾಲಗಳನ್ನು ಮೀಡಿಯಂ ಸಾಲಗಳನ್ನಾಗಿ ಪರಿವರ್ತನೆ ಮಾಡಿ ಎಂದು ತಮ್ಮಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ.

ಶ್ರೀ ಎ. ಶಂಕರ ಆಳ್ವ :—ಆ ಸ್ಟೇಟ್‌ಮೆಂಟ್ ಬರಲಿ—ಬಂದ ನಂತರ ಮಾಡುತ್ತೇವೆ.

ಶ್ರೀ ಜಿ. ಪುಟ್ಟಸ್ವಾಮಿ (ಮೂಡಿಗೆರೆ) :—ಮಾನ್ಯ ಅಧ್ಯಕ್ಷರೇ : ನನಗೆ ಆರ್. ಎಸ್. ಎಸ್. ಪಾರ್ಟಿಗೆ ಸೇರಿರತಕ್ಕ ವಿರೂಪಾಕ್ಷಪ್ಪ ಎನ್ನುವವರಿಂದ ಒಂದು ಬೆದರಿಕೆ ಪತ್ರ ಬಂದಿದೆ. ನನಗೆ ತಾವು ಸರ್ಕಾರದಿಂದ ರಕ್ಷಣೆಯನ್ನು ಕೊಡಿಸಿಕೊಡಬೇಕು. ನಾನು ಈ ಪತ್ರವನ್ನು ತಮ್ಮ ಕಡೆಗೆ ರವಾನೆ ಮಾಡುತ್ತೇನೆ. ತಾಯಿ, 20 ಸಾವಿರ ಹರಿಜನರ ಹಿತದೃಷ್ಟಿ.... ...

ಅಧ್ಯಕ್ಷರು :—ತಾವು ಆ ಪತ್ರವನ್ನು ಓದಬೇಡಿ, ನನ್ನ ಕಡೆಗೆ ಕಳುಹಿಸಿಕೊಡಿ, ನಾನು ಅದನ್ನು ಸರ್ಕಾರಕ್ಕೆ ಕಳುಹಿಸಿಕೊಡುತ್ತೇನೆ.

ಶ್ರೀ ವಿಶ್ವನಾಥರೆಡ್ಡಿ (ಯಾದ್ಗೀರ್) :—ಮಾನ್ಯ ಅಧ್ಯಕ್ಷರೆ, ನಾನು ಸರ್ಕಾರದವರ ಗಮನಕ್ಕೆ ಒಂದು ಬಹಳ ಮುಖ್ಯವಾದ ವಿಷಯವನ್ನು ತರಬೇಕಾಗಿದೆ.

ಕ್ಷಾಮಕ್ಕೆ ತುತ್ತಾಗಿರತಕ್ಕ ಬೀದಾರ್, ಗುಲ್ಬರ್ಗ ಮತ್ತು ರಾಯಚೂರು ಜಿಲ್ಲೆಗಳನ್ನು ನಾನು ಸುತ್ತಾಡಿಕೊಂಡು ಬಂದಿದ್ದೇನೆ. ಅಲ್ಲಿ ಕಳೆದ 15 ದಿನಗಳಿಂದ ಯಾವ ಡಿಪೋಗಳಲ್ಲೂ ಒಂದು ಕಾಳು ಅಕ್ಕಿಯಾಗಲೀ ಗೋಧಿಯಾಗಲಿ ಇಲ್ಲ. ಅಲ್ಲಿ ಬರಗಾಲಕ್ಕೆ ತುತ್ತಾಗಿರತಕ್ಕ ಎಲ್ಲಾ ತಾಲ್ಲೂಕುಗಳ ಒಂದು ಸಮಿತಿಯನ್ನು ಮಾಡಿದ್ದೇವೆ. ಆ ಸಮಿತಿಯವರು ಪರಿಶೀಲನೆ ನಡೆಸಿದ್ದರಲ್ಲಿ ಕಳೆದ 15 ದಿನಗಳಿಂದ ಈ ಆಹಾರ ಪರಿಸ್ಥಿತಿ ಎಲ್ಲಾ ಕಡೆಗಳಲ್ಲೂ ಪೂರಾ ಹದ ಗೆಟ್ಟಿದೆಯೆಂದು ಖಚಿತವಾಗಿ ತಿಳಿದುಬಂದಿದೆ. ಯಾವ ಅಂಗಡಿಗಳಲ್ಲಾಗಲೀ ಅಥವಾ ಡಿಪೋಗಳಲ್ಲಾಗಲೀ ಒಂದು ಕಾಳೂ ಆಹಾರಧಾನ್ಯವಿಲ್ಲ, ಅಲ್ಲಿ ತಹಸೀಲ್ದಾರರು ಎ. ಪಿ. ಸಿ. ಎಂ. ಸೊಸೈಟಿಗಳಿಗೆ 15 ಟೀಲ ಕಾಳನ್ನು ಕೊಡಿ ಎಂದು ಒಂದು ಕಾಗದವನ್ನು ಕೊಟ್ಟು ಕಳುಹಿಸಿದರೆ ಅಲ್ಲಿ ಒಂದು ಟೀಲ ಕೂಡ ದಾಸ್ತಾನಿಲ್ಲ. ಆದಾಗ್ಯೂ ಮಾನ್ಯ ಸಚಿವರಲ್ಲಿ ಏನು ಒಂದು ವರದಿಯನ್ನು ಸಭೆಯ ಮುಂದೆ ಓದುತ್ತಾರೆ, ಅದರಲ್ಲಿ ಏನೂ ಸತ್ಯಾಂಶವಿಲ್ಲ. ಇದನ್ನು ಮಾನ್ಯ

ಸಚಿವರು ಖುದ್ದಾಗಿ ಸ್ಥಳಕ್ಕೆ ಹೋಗಿ ವೆರಿಫೈ ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಪರಿಸ್ಥಿತಿ ಹೀಗೆ ಮುಂದುವರಿದಲ್ಲಿ ಇನ್ನು ಒಂದೆರಡು ದಿನಗಳಲ್ಲೇ ಪರಿಸ್ಥಿತಿ ಪೂರಾ ಬಿಗಡಾಯಿಸಬಹುದು. ಅಷ್ಟಕ್ಕೆ ಅವಕಾಶ ಕೊಡಬಾರದೆಂದು ಪಾರ್ಥನೆ ಮಾಡಿಕೊಳ್ಳುತ್ತ, ಕೂಡಲೆ ಅಲ್ಲಿಗೆ ಆಹಾರಧಾನ್ಯಗಳನ್ನು ಕಳುಹಿಸುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ಪ್ರಾರ್ಥಿಸುತ್ತೇನೆ.

ಶ್ರೀಮತಿ ಇ.ಇ. ವಾಜ್ :—ನನಗೆ ದಿನಂ ಪ್ರತಿ ಈ ಆಹಾರ ವಿತರಣೆಯ ವಿಚಾರದಲ್ಲಿ ಜಿಲ್ಲಾಧಿಕಾರಿಗಳಿಂದ ವೈರ್‌ಲೆಸ್ ಮೆಸೇಜ್ ಬರುತ್ತಿದೆ. ಈ ದಿವಸ ನಾನು ಬೀದಾರ್ ಜಿಲ್ಲೆಯ ಡೆಪ್ಯುಟಿಕಮೀಷನರನ್ನು ಕಾಂಟಾಕ್ಟ್ ಮಾಡಲು ಫೋನ್ ಮಾಡಿದಾಗ ಲೈನ್ ಔಟಾಫ್ ಆರ್ಡರ್ ಎಂದು ತಿಳಿಯಬಂದಿತು, ಅಲ್ಲಿ ಏನು ಕ್ರಮಕೈಗೊಳ್ಳಬೇಕೋ ಅದನ್ನು ಕೂಡಲೆ ಕೈಗೊಳ್ಳಲಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್:—ನಾಳೆ ನಗರದಲ್ಲಿ ಆಡಳಿತ ಕಾಂಗ್ರೆಸ್ಸಿನವರ ಒಂದು ದೊಡ್ಡ ಮೇಳ ನಡೆಯುತ್ತದೆ. ಅದಕ್ಕಾಗಿ ಸಭೆಯನ್ನು ಇವರು ಮುಂದೂಡಬಹುದೆ ಎಂದು ಕೇಳುತ್ತೇನೆ....

ಅಧ್ಯಕ್ಷರು :—ಏನು ಮಾನ್ಯ ಸದಸ್ಯರು ಹೋಗಿ ಊಟಮಾಡಿಕೊಂಡು ಈಗ ಸಭೆಗೆ ಬಂದ ಹಾಗೆ ಕಾಣುತ್ತಿದೆ....

Reasons for adjourning the House for Short Recess

ಶ್ರೀ ವಾಟಾಳ್ ನಾಗರಾಜ್ :—ಕಾಂಗ್ರೆಸ್ ಪಕ್ಷದ ಒಂದು ಮೇಳ ನಡೆಯುವುದರಿಂದ ಅದಕ್ಕಾಗಿ ಈ ಸಭೆಯನ್ನು ಮುಂದುವರಿಸುವುದು ಸರಿಯಲ್ಲ. ಆ ಮೇಳ ನಡೆಯುವ ಕಡೆ ಪಿ. ಡಬ್ಲ್ಯು. ಅಧಿಕಾರಿಗಳು ಕೆಲಸ ಮಾಡುತ್ತಿದ್ದಾರೆ, ಪೋಲೀಸರ ರಕ್ಷಣೆ ಇದೆ. ಅಲ್ಲಿ ದೊಡ್ಡ ಅರಮನೆ ಸೃಷ್ಟಿ ಮಾಡುತ್ತಿದ್ದಾರೆ. ಯಾವ ಕಾರಣದಿಂದ ಈ ಸಭೆ ಮುಂದುವರೆಸುವುದು ? ನಾಳ್ಕೈದು ದಿವಸಕ್ಕೆ ಟಿ.ಎ., ಡಿ.ಎ. ಎಷ್ಟಾಗುತ್ತದೆ. ಮುಂದುವರೆಸುವುದು ಬಹಳ ಅನ್ಯಾಯ. ಮುಂದುವರೆಸದೆ ಬೇರೆ ಕಾರ್ಯಕಲಾಪಗಳನ್ನು ನಡೆಸೋಣ. ಪಕ್ಷದ ಕೆಲಸಕ್ಕಾಗಿ ಸಭೆ ಮುಂದುವರೆಸಬಾರದು.

ಅಧ್ಯಕ್ಷರು :—ಬಿಸಿನೆಸ್ ಅಡ್ವೈಜರಿ ಕಮಿಟಿಗೆ ತಮ್ಮನ್ನೂ ಇನ್‌ವೈಟ್ ಮಾಡಿದ್ದರು. ಅಲ್ಲಿ ಒಪ್ಪಿಕೊಂಡು ಬಂದಿದ್ದೀರಿ. ಸಭೆ ಮುಂದೂಡುವ ವಿಚಾರವನ್ನು ನಾನು ಮೊನ್ನೆಯೇ ಅನೌನ್ಸ್ ಮಾಡಿದೆ. ಇಲ್ಲಿಯವರೆಗೇಕೆ ಈ ಪ್ರಸ್ತಾಪ ಮಾಡಲಿಲ್ಲ? ಮಧ್ಯೆ ಗ್ಯಾಪ್ ಬೇಕೆಂದು ಸದಸ್ಯರು ಕೇಳಿದ್ದಾರೆ. ಅವರ ಅಭಿಪ್ರಾಯದಂತೆ ಮಾಡಲಾಗಿದೆ.

ಶ್ರೀ ವಾಟಾಳ್ ನಾಗರಾಜ್ :—ನಾನು ಬಿಸಿನೆಸ್ ಅಡ್ವೈಜರಿ ಕಮಿಟಿಗೆ ಬಂದಿದ್ದರೂ ನಾನು ಆ ಸಮಿತಿಯ ಸದಸ್ಯನಲ್ಲ. ಆದುದರಿಂದ ಅಲ್ಲಿ ನಾನು ಮಾತನಾಡುವಂತಿರಲಿಲ್ಲ. ಈ ದಿವಸ ಬರಗಾಲ ಪ್ರದೇಶಕ್ಕೆ ಬೇಕಾದ ಆಹಾರ ಪದಾರ್ಥಗಳೇ ಸಾಕಷ್ಟಿಲ್ಲದಿರುವಾಗ ಕಾಂಗ್ರೆಸ್ ಅಧಿವೇಶನಕ್ಕೆ ಬರುವ ಸಾವಿರಾರು ಕಾಂಗ್ರೆಸ್ಸಿನವರಿಗೆ ಅಕ್ಕಿ, ಗೋದಿ ಎಲ್ಲಿಂದ ಬರುವುದು? ಒಂದು ಕಡೆ ಬರಗಾಲವಿರುವಾಗ ಮತ್ತೊಂದು ಕಡೆ ಸಭೆ ಮುಂದುವರೆಸಿ ಕಾಂಗ್ರೆಸ್ ಮೇಳ ನಡೆಸುವುದು ಸರಿಯೇ? ಯಾವ ಕಾರಣದಿಂದ ಕಾಂಗ್ರೆಸ್ ಮೇಳ ನಡೆಯುವುದು ಎಂಬುದನ್ನು ಸಭೆಗೆ ತಿಳಿಸಬೇಕು ಎಂದು ಪ್ರಾರ್ಥಿಸುತ್ತೇನೆ.

ಶ್ರೀ ಎಸ್. ಬಂಗಾರಪ್ಪ :—ಒಂದು ವಿಷಯ ಗಮನಕ್ಕೆ ತರುತ್ತೇನೆ. ವಾಟಾಳರು ಎತ್ತಿರುವ ವಿಷಯ ಬಹಳ ಪ್ರಾಮುಖ್ಯವಾದುದು. ರಾಜಕೀಯ ಮೇಳ ನಡೆಯುವಾಗ ಈ ಸಭೆ

ಮುಂದೂಡುವುದೇಕೆ ಎಂದು ತಿಳಿಯಬೇಕಾಗಿದೆ. ಭೂ ಸುಧಾರಣೆಗೆ ಸಂಬಂಧಪಟ್ಟ ಸೆಲೆಕ್ಟ್ ಕಮಿಟಿಯ ವರದಿ ಮಂಡಿಸಿ, ಅಪ್ರೋಪ್ರಿಯೇಷನ್ ಬಿಲ್ಲನ್ನು ಅಂಗೀಕರಿಸಿದ ಮೇಲೆ ಗ್ಯಾಪ್ ಕೊಡಿ ಎಂದು ಕಾಂಗ್ರೆಸ್ ಸದಸ್ಯರು ಕೇಳಿರಬಹುದು, ವಿರೋಧ ಪಕ್ಷದ ಸದಸ್ಯರು ಕೇಳಿಲ್ಲ. ಈ ರೀತಿ ಪಕ್ಷದ ಒಂದು ಕಾರ್ಯಕ್ರಮಕ್ಕಾಗಿ ಈ ಸಭೆಯನ್ನು ಮುಂದೂಡುವುದು ಸರ್ವಥಾ ಒಪ್ಪುವುದಕ್ಕೆ ಸಾಧ್ಯವಿಲ್ಲ. ಯಾವುದೇ ಒಂದು ಪಕ್ಷದ ಕಾರ್ಯಕ್ರಮದ ಕಾರಣದಿಂದ ಇಡೀ ಸಭೆಯನ್ನು ಮುಂದೂಡುವುದು ಸರಿಯಲ್ಲ. ದಯಮಾಡಿ ಈ ಸಭೆ ಮುಂದೂಡುವುದು ಬೇಡ. ಬಿಸಿನೆಸ್ ಅಡ್ವೈಜ್ ಕಮಿಟಿ ತೀರ್ಮಾನ ಮಾಡಿದ್ದರೂ ಆ ತೀರ್ಮಾನವನ್ನು ರಿವೈಜ್ ಮಾಡಿ ಈ ಸಭೆ ನಡೆಯುವುದಕ್ಕೆ ಅವಕಾಶ ಮಾಡಿಕೊಡಬೇಕು. ಸರಕಾರಿ ಅಧಿಕಾರಿಗಳು ಬೇಕಾದಷ್ಟು ಜನ ಕಾಂಗ್ರೆಸ್ ಮೇಳ ನಡೆಯುವ ಕಡೆ ಕೆಲಸ ಮಾಡುತ್ತಿದ್ದಾರೆ. ಇದಕ್ಕೆ ಲಕ್ಷಾಂತರ ರೂಪಾಯಿ ಸರಕಾರದಿಂದ ಖರ್ಚಾಗುತ್ತದೆ. ಇದಕ್ಕೆ ಇಡೀ ಸಭೆ ಒಪ್ಪಿದೆ ಎಂಬ ಭಾವನೆ ಬರುವುದು. ಇದನ್ನು ತಪ್ಪಿಸುವುದಕ್ಕಾಗಿ ಈಗ ತೆಗೆದುಕೊಂಡಿರುವ ತೀರ್ಮಾನ ಬದಲಾಯಿಸಿ ನಾಳೆ ಸಹ ಸಭೆ ನಡೆಯುವುದಕ್ಕೆ ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು :—ಈ ವಿಷಯ ಬಿಸಿನೆಸ್ ಅಡ್ವೈಜರಿ ಕಮಿಟಿಯಲ್ಲಿ ತೀರ್ಮಾನವಾಗಿದೆ. ಮೊನ್ನೆಯೇ ಇದನ್ನು ಅನೌನ್ಸ್ ಮಾಡಿದೆ. ಹಾಗಿರುವಾಗ ಇದುವರೆಗೆ ಸುಮ್ಮನಿದ್ದು ಈಗ ಈ ವಿಷಯ ಎತ್ತುವುದು ಸರಿಯಲ್ಲ.

(ವಿರೋಧ ಪಕ್ಷದ ಕೆಲವರು ಸದಸ್ಯರು ಈ ಸಮಯದಲ್ಲಿ ಸಭೆ ಮುಂದೂಡುವುದನ್ನು ಪ್ರತಿಭಟಿಸಿ ಸಭಾತ್ಯಾಗ ಮಾಡಿದರು)

5. The Mysore High Court (Amendment) Bill, 1973

Introduction

SRI D. K. NAIKAR (Minister for Law and Parliamentary affairs) :—Madam Speaker, On behalf of the Chief Minister, I beg to introduce :

The Mysore High Court (Amendment) Bill, 1973.

MADAM SPEAKER :—The Mysore High Court (Amendment) Bill, **1973, is Introduced.**

Mysore Co-operative Societies (2 and Amendment Bill, 1973: Introduction)

Sri A. SHANKARA ALVA (Minister for Co-operation):—Madam Speaker, I beg to introduce :

The Mysore Co-operative Societies (Second Amendment) Bill, 1973, under Rule 64 of the Rules of Procedure and Conduct of Business in the Mysore Legislative Assembly.

MADAM SPEAKER:—The Mysore Co-operative Societies (Second Amendment) Bill, 1973 is Introduced.